# ನನ್ನ ದೇಶ – ನನ್ನ ಜನ

## ಅ. ಪದಗಳ ಅರ್ಥ ಬರೆಯಿರಿ. (Write the word meaning)

ಕರಾವಳಿ = ಸಮುದ್ರದಂಡೆ

ಘಟ್ಟ = ಬೆಟ್ಟಗಳ ಸಾಲು

ಪರ್ವತ = ದೊಡ್ಡಬೆಟ್ಟ

ಫಲವತ್ತಾದ = ಸಾರವತ್ತಾದ

ಬಲಿದಾನ = ಆಹುತಿ

ಬಹು = ಅಧಿಕ, ಅನೇಕ

ಬೀಡು = ನೆಲೆ, ಮನೆ

ಮೀರಿದ = ದಾಟಿದ

ಸಂಕೇತ = ಗುರುತು

ಹಬ್ಬು = ಹರಡು

ಕೋರು = ವಿನಂತಿಸು

ನಾಡು = ದೇಶ

ಪುರಾತನ = ಹಳೆಯ

ಪ್ರತೀಕ = ಪ್ರತಿರೂಪ,ಚಿಹ್ನೆ

ಬಣ್ಣಿಸು = ಹೊಗಳು

ಬಾವುಟ = ಪತಾಕೆ, ಧ್ವಜ

ಮನೋಭಾವ= ಮನಸ್ಸಿನ ಭಾವನೆ

ವಿಶಾಲ=ವಿಸ್ತಾರವಾದ,ಅಗಲವಾದ

ಸುಳಿವು=ಸುಳುಹು,ಕುರುಹು, ಜಾಡು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಆ. ಬಿಟ್ಟ ಸ್ಥಳ ತುಂಬಿರಿ. (Fill in the blanks)

೧. ಹಸಿರು ಬಣ್ಣದ ಸೂಚಕ ಸಮೃದ್ಧಿ.

೨. ಕೇಸರಿ ಬಣ್ಣದ ಪ್ರತೀಕ ತ್ಯಾಗ.

೩. ಬಿಳಿಯ ಬಣ್ಣದ ಪ್ರತೀಕ ಶಾಂತಿ .

೪. ನಮ್ಮ ರಾಷ್ಟ್ರಧ್ವಜವು ಮೂರು ಬಣ್ಣಗಳಿಂದ ಕೂಡಿದೆ.

## ಇ. ಒಂದು ವಾಕ್ಯದಲ್ಲಿ ಉತ್ತರಿಸಿ. (Answer the following in one sentence)

೧. ನಮ್ಮ ದೇಶ ಯಾವುದು?

ಉ:ನಮ್ಮ ದೇಶ ಭಾರತ.

೨. ಭಾರತವನ್ನು ಯಾವ ಯಾವ ಹೆಸರುಗಳಿಂದ ಕರೆಯುತ್ತಾರೆ?

ಉ:ಭಾರತವನ್ನು ಭರತ ಖಂಡ, ಇಂಡಿಯಾ, ಹಿಂದೂಸ್ಥಾನ ಎಂಬ ಹೆಸರುಗಳಿಂದ ಕರೆಯುತ್ತಾರೆ.

೩. ಭಾರತದಲ್ಲಿ ಹರಿಯುವ ಪ್ರಮುಖ ನದಿಗಳು ಯಾವುವು?

ಉ:ಭಾರತದಲ್ಲಿ ಹರಿಯುವ ಪ್ರಮುಖ ನದಿಗಳು ಗಂಗಾ, ಯಮುನಾ, ಸಿಂಧೂ, ಕಾವೇರಿ, ಕೃಷ್ಣ, ಗೋದಾವರಿ ಮುಂತಾದವು.

೪. ಭಾರತದಲ್ಲಿ ಕಂಡುಬರುವ ಪ್ರಮುಖ ಕಾಡು ಪ್ರಾಣಿಗಳಾವುವು?

ಉ:ಭಾರತದಲ್ಲಿ ಕಂಡುಬರುವ ಪ್ರಮುಖ ಕಾಡು ಪ್ರಾಣಿಗಳು ಹುಲಿ, ಸಿಂಹ, ಆನೆ, ಜಿಂಕೆ, ಚಿರತೆ ಮುಂತಾದವು.

೫. ನಮ್ಮ ರಾಷ್ಟ್ರಗೀತೆ ಯಾವುದು? ಅದನ್ನು ರಚಿಸಿದ ಕವಿ ಯಾರು?

ಉ:ನಮ್ಮ ರಾಷ್ಟ್ರಗೀತೆ 'ಜನಗಣಮನ'. ಅದನ್ನು ರಚಿಸಿದ ಕವಿ ರವಿಂದ್ರನಾಥ ಟಾಗೋರ್.

೬. "ವಂದೇ ಮಾತರಂ" ಗೀತೆಯನ್ನು ರಚಿಸಿದವರು ಯಾರು?

ಉ:"ವಂದೇ ಮಾತರಂ" ಗೀತೆಯನ್ನು ರಚಿಸಿದವರು ಬಂಕಿಮಚಂದ್ರ ಚಟರ್ಜಿ.

೭. ನಮ್ಮ ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳಾವುವು?

ಉ:ನಮ್ಮ ರಾಷ್ಟ್ರಧ್ವಜದಲ್ಲಿರುವ ಮೂರು ಬಣ್ಣಗಳು ಕೇಸರಿ, ಬಿಳಿ ಮತ್ತು ಹಸಿರು.

FOR KANNADA
ಕನ್ನಡದಲ್ಲಿ ಇಲ್ಲಿ ಏನಿದೆ

## ಈ. ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. (Answer the following in two – three sentences)

೧. ಭಾರತದಲ್ಲಿ ಯಾವ ಯಾವ ಧರ್ಮದವರಿದ್ದಾರೆ?

ಉ: ಭಾರತದಲ್ಲಿ ಹಿಂದೂ, ಜೈನ, ಕ್ರೈಸ್ತ, ಬೌದ್ಧ ಧರ್ಮದವರಿದ್ದಾರೆ.

೨. ಭಾರತದಲ್ಲಿನ ಜನ ಯಾವ ಯಾವ ಭಾಷೆಗಳನ್ನಾಡುತ್ತಾರೆ?

ಉ: ಭಾರತದಲ್ಲಿನ ಜನ ಕನ್ನಡ, ಹಿಂದಿ, ಬಂಗಾಳಿ, ಪಂಜಾಬಿ, ಮರಾಠಿ, ತೆಲುಗು, ತಮಿಳು, ಮಲಯಾಳಿ ಭಾಷೆಗಳನ್ನಾಡುತ್ತಾರೆ.

೩. ಭಾರತೀಯರಲ್ಲಿ ಎಂತಹ ಗುಣ ಸ್ವಭಾವಗಳಿವೆ?

ಉ:ಭಾರತೀಯರು ಶಾಂತಿಪ್ರಿಯರು. ವಿಶಾಲ ಮನೋಭಾವದವರು. ಜಾತಿ-ಮತ-ಭಾಷೆ ಮೀರಿದವರು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೪. ನಮ್ಮ ರಾಷ್ಟ್ರಧ್ವಜದ ವಿಶೇಷತೆಗಳೇನು?

ಉ:ನಮ್ಮ ರಾಷ್ಟ್ರಧ್ವಜದಲ್ಲಿರುವ 'ಕೇಸರಿ' ಬಣ್ಣ ತ್ಯಾಗದ ಸಂಕೇತ. 'ಬಿಳಿ' ಶಾಂತಿಯ ಸಂಕೇತ ಮತ್ತು 'ಹಸಿರು' ಸಮೃದ್ಧಿಯ ಸಂಕೇತ. ನಡುವೆ ಇರುವ 'ನೀಲಿ' ಬಣ್ಣದ ಚಕ್ರ ಧರ್ಮಚಕ್ರ.

೫. ದೇಶದ ರಕ್ಷಣೆಗಾಗಿ ಮಡಿದ ವೀರಯೋಧರ ಹೆಸರುಗಳನ್ನು ಬರೆಯಿರಿ.

ಉ:ದೇಶದ ರಕ್ಷಣೆಗಾಗಿ ಮಡಿದ ವೀರಯೋಧರ ಹೆಸರುಗಳು ಕಿತ್ತೂರು ಚೆನ್ನಮ್ಮ, ರಾಣಿ ಲಕ್ಷ್ಮಿಬಾಯಿ, ಟಿಪ್ಪು ಸುಲ್ತಾನ, ಭಗತ್ ಸಿಂಗ್,ಚಂದ್ರಶೇಖರ ಆಜಾದ ಮುಂತಾದವರು.

೬. ದೇಶದ ಪ್ರಮುಖ ಕವಿಗಳು ಹಾಗೂ ಮಹಾತ್ಮರ ಹೆಸರುಗಳನ್ನು ಪಟ್ಟಿಮಾಡಿ.

ಉ:ದೇಶದ ಪ್ರಮುಖ ಕವಿಗಳು ಹಾಗೂ ಮಹಾತ್ಮರ ಹೆಸರುಗಳು ವಾಲ್ಮೀಕಿ,

ರಾಘವಾಂಕ, ವ್ಯಾಸ, ಪಂಪ, ಹರಿಹರ, ಬಸವ, ಅಲ್ಲಮ, ಗಾಂಧೀಜಿ, ಅಂಬೇಡ್ಕರ್ ಮುಂತಾದವರು.

## ಉ. ಹೊಂದಿಸಿ ಬರೆಯಿರಿ. (Match the following)

| ಅ | ಬ | |
|---|---|---|
| ಅ) ಹಿಮಾಲಯ | ೧) ಸಮುದ್ರ | ಪರ್ವತ |
| ಆ) ಕನ್ನಡ | ೨) ಕವಿ | ಭಾಷೆ |
| ಇ) ಕಾವೇರಿ | ೩) ಪರ್ವತ | ನದಿ |
| ಈ) ಪಂಪ | ೪) ಧರ್ಮ | ಕವಿ |
| ಉ) ಕ್ರೈಸ್ತ | ೫)ಭಾಷೆ | ಧರ್ಮ |
| | ೬) ನದಿ | |

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಊ. ಸ್ವಂತ ವಾಕ್ಯ ರಚಿಸಿರಿ. (Make your own sentence)

೧. ಪುರಾತನ: ಆ ದೇವಸ್ಥಾನ ಪುರಾತನ ಕಾಲದ್ದು.

೨. ಸುತ್ತುವರೆ: ಕೋಟೆಯನ್ನು ಸೈನಿಕರು ಸುತ್ತುವರೆದರು.

೩. ಹಚ್ಚಹಸಿರು: ಕಬಿನಿ ಕಾಡು ಹಚ್ಚಹಸಿರಾಗಿದೆ.

೪. ಬಲಿದಾನ: ಸೈನಿಕರ ಬಲಿದಾನ ದೊಡ್ಡದು.

೫. ಬೀಡು : ಸೈನಿಕರು ಮೈದಾನದಲ್ಲಿ ಬೀಡು ಬಿಟ್ಟಿದ್ದರು.

ಋ. ಕೆಳಗಿನ ವಾಕ್ಯಗಳನ್ನು ಸರಿಪಡಿಸಿರಿ. (Correct the following sentence)

೧. ದಕ್ಷಿಣಪೀಠ ಭೂಮಿಯನ್ನು ಸಮುದ್ರಗಳು ಸುತ್ತುವರಿದಿವೆ.

ಉ: ದಕ್ಷಿಣಪೀಠ ಭೂಮಿಯನ್ನು ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳು ಸುತ್ತುವರಿದಿವೆ.

೨. ಭಾರತ ದೇಶದ ದಕ್ಷಿಣಕ್ಕೆ ಹಿಮಾಲಯ ಪರ್ವತ ಇದೆ.

ಉ:ಭಾರತ ದೇಶದ ಉತ್ತರಕ್ಕೆ ಹಿಮಾಲಯ ಪರ್ವತ ಇದೆ.

೩. ನಮ್ಮದು ಬಹುಭಾಷೆ ಹೊಂದಿರುವ ಸಣ್ಣ ದೇಶ.

ಉ: ನಮ್ಮದು ಬಹುಭಾಷೆ ಹೊಂದಿರುವ ದೊಡ್ಡ ದೇಶ.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ